# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 34/2018**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಮಹದೇವಸ್ವಾಮಿ | *ಪ್ರಮಾಣ ಮಾಡಿಸಿದ ದಿನಾಂಕಃ* | |
| ತಂದೆ ಹೆಸರು | ಃ | ಮಾದಪ್ಪ | **19.12.2019** | |
| ವಯಸ್ಸು | ಃ | 38 ವರ್ಷ | | |
| ವೃತ್ತಿ | ಃ | ಬಟ್ಟೆ ವ್ಯಾಪಾರ | ಪ್ರಾ.ಸಾ. ಃ | 04 |
| ವಾಸಸ್ಥಳ | ಃ | ಲಲಿತಾದ್ರಿಪುರ, ಮೈಸೂರು | ಚಾ.ಸಾ. ಃ | 10 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ಮೃತ ರಾಜು ಈತನು ನನ್ನ ಅಣ್ಣನ ಮಗನು ಇದ್ದನು. ಸದರಿ ರಾಜು ಈತನನ್ನು ಸುಮಾರು *3* ವರ್ಷದ ಹಿಂದೆ ಉದಯಗಿರಿ ಏರಿಯಾದಲ್ಲಿ ಕೊಲೆಯಾಗಿ ಮೃತಪಟ್ಟಿರುತ್ತಾನೆ ಎಂದು ತಿಳಿಸಿದ್ದರು. ನಾನು ಕೆ ಆರ್ ಆಸ್ಪತ್ರೆ ಗೆ ಹೋಗಿ ಮೃತ ದೇಹವನ್ನು ನೋಡಿರುತ್ತೇನೆ. ನಾನು ನೋಡಿದಾಗ ಮೃತ ರಾಜು ಈತನ ಕುತ್ತಿಗೆ ಬಳಿ ಮತ್ತು ಬೆನ್ನಿನ ಬಳಿ ಗಾಯವಾಗಿದ್ದವು. ಮೃತ ರಾಜು ಈತನನ್ನು ಯಾರು ಕೊಲೆ ಮಾಡಿದ್ದರು, ಹೇಗೆ ಕೊಲೆ ಮಾಡಿದ್ದರು ಎಂಬುದು ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ಘಟನೆ ಹೇಗೆ ಆಯಿತು ಎಂದು ನನಗೆ ತಿಳಿಸಿರುವುದಿಲ್ಲ. ನಾನು ಯಾರ ಮುಖಾಂತರವೂ ಘಟನೆ ಹೇಗೆ ನಡೆದಿರುತ್ತದೆ ಎಂಬುದು ಹಾಗೂ ಯಾರು ಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡಿಲ್ಲ. ಪೊಲೀಸ್ ನವರ ಮುಂದೆ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

.ನಾನು ಆಸ್ಪತ್ರೆಗೆ ಹೋದಾಗ ಜಯಕುಮಾರ ಈತನು ಈ ಘಟನೆಯ ಬಗ್ಗೆ ನನಗೆ ತಿಳಿಸಿದರು ದಿನಾಂಕಃ **13.03.2016** ರಂದು ಸಂಜೆ **5.00** ಗಂಟೆಗೆ ಜಯರಾಮು ಎಂಬುವವರ ಅಂಗಡಿಯ ಮುಂದೆ ನಾನು ಮತ್ತು ರಾಜು ಟೀ ಕುಡಿಯುವಾಗ **30-35** ವಯಸ್ಸಿನ ವ್ಯಕ್ತಿ ಏಕಾಏಕಿ ಬಂದು ಮಚ್ಚಿನಿಂದ ತಲೆಯ ಎಡಭಾಗಕ್ಕೆ ಮತ್ತು ಬೆನ್ನಿಗೆ ಹೊಡೆದು ಗಾಯಪಡಿಸಿದ ಎಂದು ಜಯಕುಮಾರ ಈತನು ನನಗೆ ವಿಚಾರ ತಿಳಿಸಿದೆನು ಎಂದು ನಾನು ಪೊಲೀಸ್ ನವರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಶವ ಪಂಚನಾಮೆಯನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಹೇಳಿಕೆಯನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು ಃ ಎಲ್ಲಾ ಆರೋಪಿತರ ಪರ ವಕೀಲರಿಂದಃ-

. ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

*ಮರು ವಿಚಾರಣೆಃ- ಇಲ್ಲ.*

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*